4.	ಬಿಜಾಪುರ	61	13.20
5.	ಬಾಗಲಕೋಟೆ	6498	4599.51
6.	ರಾಮನಗರ	2	10.00
7.	ತುಮಕೂರು	18	32.70
	ಒಟ್ಟು	**9521**	**7929.08**

ಆ) ಪಟ್ಟಣ ಸಹಕಾರ ಬ್ಯಾಂಕುಗಳ ದುಡಿಯುವ ಬಂಡವಾಳದ ಪ್ರಮಾಣವು ಶೇ.9.5 ರಿಂದ ಶೇ.10 ರಷ್ಟಿದ್ದು ಅವುಗಳು ಸಾಮಾನ್ಯವಾಗಿ ಸಾಲಗಳ ಮೇಲೆ ಶೇ.14 ರಿಂದ 16 ರಷ್ಟು ಬಡ್ಡಿ ವಿಧಿಸುತ್ತಿದ್ದು ಸರ್ಕಾರದ ಆದೇಶದಂತೆ ಶೇ.3ರ ಬಡ್ಡಿ ದರದಲ್ಲಿ ಸಾಲ ನೀಡುವ ಯೋಜನೆಯನ್ನು ಜಾರಿಗೊಳಿಸಿದಲ್ಲಿ ನೇಕಾರರಿಂದ ಶೆ.3 ಮತ್ತು ಸರ್ಕಾರದಿಂದ ಶೇ.9.5 ಬಡ್ಡಿ ಸಹಾಯಧನ ಸೇರಿ ಒಟ್ಟು ಬಡ್ಡಿ ಶೇ.12.5 ರಷ್ಟಾಗಿ ಸಹಕಾರ ಸಂಸ್ಥೆಗಳಿಗೆ ಕನಿಷ್ಠ ಶೇ.2 ರಷ್ಟು ಬಡ್ಡಿ ಕಡಿಮೆಯಾಗಿರುವುದಿಂದ ಅವುಗಳು ನೇಕಾರರಿಗೆ ಶೇ.3ರ ಬಡ್ಡಿ ದರದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸಾಲವನ್ನು ಮಂಜೂರು ಮಾಡಲು ಮುಂದೆ ಬಂದಿರುವುದಿಲ್ಲ.

ಇ) ಇಲ್ಲ.

ರಾಜ್ಯ ಹೆದ್ದಾರಿ ಅಭಿವೃದ್ಧಿ

560 (754) ಶ್ರೀ ತುಕಾರಾಮ ಇ. (ಸಂಡೂರ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಹೆದ್ದಾರಿ 49 ರಲ್ಲಿ ಬರುವ ಸಂಡೂರು–ಹೊಸಪೇಟೆ ರಸ್ತೆ ಬಹಳ ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ರಸ್ತೆ ಕಾಮಗಾರಿಯನ್ನು ಸರ್ಕಾರ ಎಂದು ಪ್ರಾರಂಭಿಸಲಾಗುವುದು;

ಇ) ರಾಜ್ಯ ಹೆದ್ದಾರಿ 40 ರಲ್ಲಿ ಬರುವ ಸಂಡೂರು–ಕೂಡ್ಲಿಗಿ ಹಾಗೂ ಸಂಡೂರು–ತೋರಣ ಗಲ್ಲು ರಸ್ತೆಗಳು ತೀರಾ ಹದಗೆಟ್ಟಿದ್ದು ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದರೆ, ಈ ರಸ್ತೆಗಳ ದುರಸ್ತಿಗಳ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಸರ್ಕಾರದ ಗಮನಕ್ಕೆ ಬಂದಿದೆ.

ಆ) ಈ ರಸ್ತೆಯ ಕಿಮೀ 24.00 ರಿಂದ 26.00 ರವರೆಗೆ (2.00 ಕಿಮೀ ಉದ್ದ) ಸುಧಾರಣೆ ಕಾಮಗಾರಿಯು 2009–10ನೇ ಸಾಲಿನ ಸುವರ್ಣ ರಸ್ತೆ ಯೋಜನೆ ಅಡಿಯಲ್ಲಿ ರೂ.104.16 ಲಕ್ಷ ಮೊತ್ತಕ್ಕೆ ಮಂಜೂರಾಗಿದ್ದು, ಸದರಿ ಕಾಮಗಾರಿಗೆ ಈಗಾಗಲೇ ಗುತ್ತಿಗೆ ನಿಗದಿಯಾಗಿದ್ದು, ಸಧ್ಯದಲ್ಲೇ ಕೆಲಸ ಪ್ರಾರಂಭಿಸಲಾಗುವುದು.

ಅಲ್ಲದೇ ಸದರಿ ರಸ್ತೆಯು 0.00 ರಿಂದ 1.00 ರಲ್ಲಿ ರಸ್ತೆ ಸುಧಾರಣೆ ಕಾಮಗಾರಿಯು 5054 ಡಾ: ನಂಜೂಂಡಪ್ಪ ವರದಿ ಯೋಜನೆ ಅಡಿಯಲ್ಲಿ ರೂ.62.01 ಲಕ್ಷ ಮೊತ್ತಕ್ಕೆ ಅನುಮೋದನೆಯಾಗಿದ್ದು, ಇ–ಪೋರ್ಟಲ್‌ನಲ್ಲಿ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದ್ದು, ಸಧ್ಯದಲ್ಲಿಯೇ ಈ ಕಾಮಗಾರಿಗೂ ಸಹ ಗುತ್ತಿಗೆ ನಿಗದಿಪಡಿಸಿ ಕೆಲಸ ಪ್ರಾರಂಭಿಸಲಾಗುವುದು.

ಇ) ಹೌದು ಬಂದಿದೆ.

ಈ) ಸದರಿ ರಸ್ತೆಗಳಿಗಾಗಿ 2009–10ನೇ ಸಾಲಿಗೆ 5054–ಸುವರ್ಣ ರಸ್ತೆ ಯೋಜನೆ ಅಡಿಯಲ್ಲಿ ಪ್ರತಿ ರಸ್ತೆಗೆ ರೂ.104.16 ಲಕ್ಷ ಮೊತ್ತದ ಕಾಮಗಾರಿಗಳು ಅನುಮೋದನೆಯಾಗಿರುತ್ತವೆ. ಈ ಕಾಮಗಾರಿಯಡಿ ಕಿಮೀ 127.25 ರಿಂದ 128.20 ಹಾಗೂ ಕಿಮೀ 131.50 ರಿಂದ 136.10 ರವರೆಗಿನ ಒಟ್ಟು 4.95 ಕಿಮೀ ಉದ್ದ ರಸ್ತೆಯನ್ನು ಅಭಿವೃದ್ಧಿ ಪಡಿಸಲು ಪ್ರಸ್ತಾಪಿಸ ಲಾಗಿದೆ. ಈ ಪೈಕಿ ಒಂದು ಕಾಮಗಾರಿಗೆ ಗುತ್ತಿಗೆ ನಿಗದಿಪಡಿಸಲಾಗಿದೆ ಹಾಗೂ ಮತ್ತೊಂದು ಕಾಮಗಾರಿಗೆ ಇ–ಪೋರ್ಟಲ್ ಮುಖಾಂತರ ಗುತ್ತಿಗೆ ನಿಗದಿಪಡಿಸುವ ಪ್ರಕ್ರಿಯೆ ಜಾರಿಯಲ್ಲಿದೆ.

ಅಲ್ಲದೇ 2009–10ನೇ ಸಾಲಿನ 5054 ಡಾ: ನಂಜುಂಡಪ್ಪ ವರದಿ ಯೋಜನೆ ಅಡಿಯಲ್ಲಿ ಸದರಿ ರಸ್ತೆ ಸುಧಾರಣೆಗಾಗಿ ಒಟ್ಟು ರೂ.223.35 ಲಕ್ಷ ಮೊತ್ತದ ಕಾಮಗಾರಿಗಳು ಅನುಮೋದನೆಯಾಗಿರುತ್ತವೆ. ಈ ಯೋಜನೆ ಅಡಿಯಲ್ಲಿ ಕಿಮೀ 125.12 ರಿಂದ 131.25 ರವರೆಗಿನ ಒಟ್ಟು 6.10 ಕಿಮೀ ಉದ್ದ ಅಭಿವೃದ್ಧಿಪಡಿಸಲು ಪ್ರಸ್ತಾಪಿಸಲಾಗಿದೆ. ಈ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದ್ದು, ಗುತ್ತಿಗೆ ನಿಗದಿಪಡಿಸಿ ಲೋಕೋಪಯೋಗಿ ಇಲಾಖೆ ಯಿಂದ ಕೆಲಸ ಪ್ರಾರಂಭಿಸಲಾಗುವುದು.